रेलवे भर्ती बोर्ड | RAILWAY RECRUITMENT BOARD

सीईएन ०१/२०२६ सहायक लोको पायलट (एएलपी) के पद पर भर्ती

CEN 01/2026 Recruitment of Assistant Loco Pilot (ALP)

Test Date	05/11/2026
Test Time	9:00 AM - 10:00 AM
Subject	RRB ALP 2026 CBT 1

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB ALP**

Q.1 F, G, H, M, N ಮತ್ತು O ಅವರು ಒಂದೇ ಕಟ್ಟಡದ ಆರು ವಿಭಿನ್ನ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಕಟ್ಟಡದ ಅತ್ಯಂತ ಕೆಳಗಿನ ಮಹಡಿಗೆ ಸಂಖ್ಯೆ 1, ಅದರ ಮೇಲಿನ ಮಹಡಿಗೆ ಸಂಖ್ಯೆ 2 ಮತ್ತು ಹೀಗೆ ಮುಂದುವರಿಯುತ್ತ ಅತ್ಯಂತ ಮೇಲಿನ ಮಹಡಿಗೆ ಸಂಖ್ಯೆ 6 ಎಂದು ಸೂಚಿಸಲಾಗಿದೆ. ಕೇವಲ O ಅವರು F ಅವರ ಮೇಲೆ ವಾಸಿಸುತ್ತಿದ್ದಾರೆ. H ಅವರು F ಅವರ ತಕ್ಷಣದ ಕೆಳಗೆ ವಾಸಿಸುತ್ತಿದ್ದಾರೆ. ಕೇವಲ G ಅವರು N ಅವರ ಕೆಳಗೆ ವಾಸಿಸುತ್ತಿದ್ದಾರೆ. M ಮತ್ತು O ಅವರ ನಡುವೆ ಎಷ್ಟು ಜನರು ವಾಸಿಸುತ್ತಿದ್ದಾರೆ?

Ans
- ✗ A. ನಾಲ್ವರು
- ✗ B. ಮೂವರು
- ✓ C. ಇಬ್ಬರು
- ✗ D. ಒಬ್ಬರು

Q.2 ಒಂದು ತ್ರಿಭುಜದ ಬಾಹುಗಳು 7, 9 ಮತ್ತು x ಆಗಿವೆ. x ನ ಯಾವ ಮೌಲ್ಯಕ್ಕೆ ಆ ತ್ರಿಭುಜದ ವಿಸ್ತೀರ್ಣವು ಗರಿಷ್ಠವಾಗಿರುತ್ತದೆ?

Ans
- ✓ A. $\sqrt{130}$
- ✗ B. $\sqrt{110}$
- ✗ C. $\sqrt{120}$
- ✗ D. $\sqrt{140}$

Q.3 ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರಬೇಕು?

62 63 65 69 77 ?

Ans
- ✗ A. 97
- ✗ B. 91
- ✓ C. 93
- ✗ D. 95

Q.4 ಟ್ರಕ್ ಮೇಲೆ ಭಾರದ ಪೆಟ್ಟಿಗೆಗಳನ್ನು ಹೇರಲು ಇಳಿಜಾರನ್ನು ಬಳಸಲಾಗುತ್ತದೆ. ಒಂದು ವೇಳೆ ಇಳಿಜಾರನ್ನು ಉದ್ದವಾಗಿಸಿ, ಎತ್ತರವನ್ನು ಅಷ್ಟೇ ಇರಿಸಿಕೊಂಡರೆ, ಅದರಿಂದಾಗುವ ಯಾಂತ್ರಿಕ ಅನುಕೂಲವೇನು ಮತ್ತು ಏಕೆ?

Ans
- ✗ A. ಇಳಿಜಾರು ಕಡಿದಾಗಿರುವುದರಿಂದ ಯಾಂತ್ರಿಕ ಅನುಕೂಲವು ಕಡಿಮೆಯಾಗುತ್ತದೆ
- ✓ B. ಇನ್‌ಪುಟ್ ಬಲವು ಹೆಚ್ಚಿನ ದೂರದಲ್ಲಿ ಹರಡಿರುವುದರಿಂದ ಯಾಂತ್ರಿಕ ಅನುಕೂಲವು ಹೆಚ್ಚಾಗುತ್ತದೆ
- ✗ C. ಇಳಿಜಾರು ಕಡಿಮೆಯಾಗುವುದರಿಂದ ಯಾಂತ್ರಿಕ ಅನುಕೂಲವು ಕಡಿಮೆಯಾಗುತ್ತದೆ
- ✗ D. ಇಳಿಜಾರು ಹೆಚ್ಚಾಗಿರುವುದರಿಂದ ಯಾಂತ್ರಿಕ ಅನುಕೂಲವು ಹೆಚ್ಚಾಗುತ್ತದೆ

Q.5 P, Q, R, S, T, U ಮತ್ತು V ಅವರಿಗೆ ಸೋಮವಾರದಿಂದ ಪ್ರಾರಂಭವಾಗಿ ಮತ್ತು ಅದೇ ವಾರದ ಭಾನುವಾರ ಕೊನೆಗೊಳ್ಳುವ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ಪರೀಕ್ಷೆ ಇದೆ. V ಅವರಿಗೆ ಗುರುವಾರದಂದು ಪರೀಕ್ಷೆ ಇದೆ. V ಮತ್ತು P ನಡುವೆ ಒಬ್ಬರಿಗೆ ಮಾತ್ರ ಪರೀಕ್ಷೆ ಇದೆ. Q ಅವರಿಗೆ P ಅವರ ತಕ್ಷಣದ ಮರುದಿನ ಪರೀಕ್ಷೆ ಇದೆ, ಆದರೆ ಭಾನುವಾರದಂದು ಅಲ್ಲ. U ಅವರಿಗೆ V ಅವರ ತಕ್ಷಣದ ಮರುದಿನ ಪರೀಕ್ಷೆ ಇದೆ. S ಅವರಿಗೆ T ಅವರ ತಕ್ಷಣದ ಹಿಂದಿನ ದಿನ ಪರೀಕ್ಷೆ ಇದೆ. P ಅವರಿಗೆ R ಅವರ ತಕ್ಷಣದ ಮರುದಿನ ಪರೀಕ್ಷೆ ಇದೆ. ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ, ನೀಡಿರುವ ವ್ಯವಸ್ಥೆಯಲ್ಲಿ S ಅವರು ಶನಿವಾರಕ್ಕೆ ಸಂಬಂಧಿಸಿದಂತೆ Q ಅವರು ಬುಧವಾರಕ್ಕೆ ಸಂಬಂಧಿಸಿದ್ದಾರೆ. ಇದೇ ತರ್ಕವನ್ನು ಅನುಸರಿಸಿದಾಗ T ಅವರು ಈ ಕೆಳಗಿನವುಗಳಲ್ಲಿ ಯಾವ ದಿನಕ್ಕೆ ಸಂಬಂಧಿಸಿದ್ದಾರೆ?

Ans
- ✗ A. ಸೋಮವಾರ
- ✗ B. ಶುಕ್ರವಾರ
- ✓ C. ಭಾನುವಾರ
- ✗ D. ಮಂಗಳವಾರ

Q.6 ಈ ಕೆಳಗೆ ನೀಡಿರುವ ಅಕ್ಷರ ಮತ್ತು ಚಿಹ್ನೆಗಳನ್ನೊಳಗೊಂಡ ಸರಣಿಯನ್ನು ಪರಿಶೀಲಿಸಿ ಮತ್ತು ಆನಂತರದ ಪ್ರಶ್ನೆಗೆ ಉತ್ತರಿಸಿ.

(ಎಡ) X G # E A @ $ R & U Ω T £ D H Y (ಬಲ)

ಒಂದು ವೇಳೆ ಈ ಸರಣಿಯಲ್ಲಿರುವ ಎಲ್ಲಾ ಚಿಹ್ನೆಗಳನ್ನು ಕೈ ಬಿಟ್ಟರೆ, ಈ ಕೆಳಗಿನವುಗಳಲ್ಲಿ ಯಾವುದು ಎಡದಿಂದ ಮೂರನೇ ಸ್ಥಾನದಲ್ಲಿರುತ್ತದೆ?

Ans
- ✗ A. G
- ✗ B. A
- ✗ C. R
- ✓ D. E

Q.7 ಈ ಕೆಳಗಿನ ಯಾವ ಸಂಖ್ಯೆಯು 47 ಮತ್ತು 21 ಎರಡರಿಂದಲೂ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ?

Ans
- ✗ A. 49923
- ✗ B. 46676
- ✗ C. 47390
- ✓ D. 48363

Q.8 A, B, C, D ಮತ್ತು E ಎಂಬವರು ಒಂದು ಪರೀಕ್ಷೆಯಲ್ಲಿ ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. C ಅವರು ಕೇವಲ 1 ವ್ಯಕ್ತಿಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. E ಅವರು A ಗಿಂತ ಹೆಚ್ಚು, ಆದರೆ D ಗಿಂತ ಕಡಿಮೆ ಅಂಕಗಳನ್ನು ಪಡೆದಿದ್ದಾರೆ. A ಅವರು B ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಹಾಗಾದರೆ ಯಾರು ಅತ್ಯಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ?

Ans
- ✗ A. C
- ✗ B. A
- ✓ C. D
- ✗ D. E

Q.9 ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆಮಾಡಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

BOA : XQW
TSS : PUO

Ans
- ✗ A. DWP : AYM
- ✗ B. KTO : HWL
- ✗ C. YGD : WKB
- ✓ D. LWK : HYG

Q.10 ಒಬ್ಬ ಮಹಿಳೆಯ ಮಾಸಿಕ ಆದಾಯವು ₹50,000 ಆಗಿದೆ. ಅವರು ಬಾಡಿಗೆಗೆ 25%, ಆಹಾರಕ್ಕಾಗಿ 35% ಮತ್ತು ಸಾರಿಗೆಗೆ 20% ಖರ್ಚು ಮಾಡುತ್ತಾರೆ ಮತ್ತು ಉಳಿದ ಹಣವನ್ನು ಉಳಿತಾಯ ಮಾಡುತ್ತಾರೆ. ಹಾಗಾದರೆ ಪ್ರತಿ ತಿಂಗಳು ಆಕೆಯ ಉಳಿತಾಯ ಎಷ್ಟು?

Ans
- ✓ A. ₹10,000
- ✗ B. ₹12,500
- ✗ C. ₹8,000
- ✗ D. ₹15,000

Q.11 A, B, C, D, E, F, ಮತ್ತು G ಎಂಬ ಎಲ್ಲರೂ ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. A ಅವರು D ಅವರ ಬಲಕ್ಕೆ ಎರಡನೆಯ ಸ್ಥಾನದಲ್ಲಿ ಕುಳಿತಿದ್ದಾರೆ. E ಅವರು A ಮತ್ತು G ಅವರಿಬ್ಬರಿಗೂ ಸಹ ತಕ್ಷಣದ ನೆರೆಹೊರೆಯವರಾಗಿದ್ದಾರೆ. D ಅವರು B ಮತ್ತು C ಅವರಿಬ್ಬರಿಗೂ ಸಹ ತಕ್ಷಣದ ನೆರೆಹೊರೆಯವರಾಗಿದ್ದಾರೆ. ಒಂದು ವೇಳೆ F ಅವರು ನಿಖರವಾಗಿ C ಅವರ ಎಡಕ್ಕೆ ಕುಳಿತಿದ್ದರೆ, G ಅವರ ತಕ್ಷಣದ ಎಡಕ್ಕೆ ಯಾರು ಕುಳಿತಿದ್ದಾರೆ?

Ans
- ✓ A. E
- ✗ B. C
- ✗ C. F
- ✗ D. B

Q.12 ಒಂದು ವೇಳೆ x ಎಂಬುದು 0.16 ಮತ್ತು 0.64 ರ ನಡುವಿನ ಸರಾಸರಿ ಸಮಾನುಪಾತ ಆಗಿದ್ದರೆ, x ನ ಮೌಲ್ಯ ಎಷ್ಟು?

Ans
- ✗ A. 0.24
- ✗ B. 0.40
- ✗ C. 0.48
- ✓ D. 0.32

Q.13 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರು ಅಂಕಿಗಳ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 429 476 483 521 589 (ಬಲ)
(ಉದಾಹರಣೆಗೆ- 697ರಲ್ಲಿ – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)

ಒಂದು ವೇಳೆ ಎರಡನೇ ಅತ್ಯಂತ ದೊಡ್ಡ ಸಂಖ್ಯೆಯ ಎರಡನೇ ಅಂಕಿಯನ್ನು ಎರಡನೇ ಅತ್ಯಂತ ಸಣ್ಣ ಸಂಖ್ಯೆಯ ಮೂರನೇ ಅಂಕಿಗೆ ಕೂಡಿಸಿದರೆ ಸಿಗುವ ಲಬ್ಧ ಎಷ್ಟು?

Ans
- ✗ A. 7
- ✗ B. 9
- ✓ C. 8
- ✗ D. 6

Q.14 A ಅವರು ₹1,08,000 ಹೂಡಿಕೆ ಮಾಡಿ ಒಂದು ವ್ಯಾಪಾರವನ್ನು ಪ್ರಾರಂಭಿಸಿದರು. 6 ತಿಂಗಳುಗಳ ನಂತರ, B ಅವರು ₹1,44,000 ಬಂಡವಾಳದೊಂದಿಗೆ ಅವರನ್ನು ಸೇರಿಕೊಂಡರು. ವರ್ಷದ ಕೊನೆಯಲ್ಲಿ, ಅವರಿಬ್ಬರು ₹82,000 ಲಾಭ ಗಳಿಸಿದರು. ಹಾಗಾದರೆ B ಅವರ ಲಾಭದ ಪಾಲನ್ನು ಕಂಡುಹಿಡಿಯಿರಿ.

Ans
- ✓ A. ₹32,800
- ✗ B. ₹30,000
- ✗ C. ₹48,000
- ✗ D. ₹46,000

blackbook

Q.15 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 9 ಎಂಬುದು 83 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 16 ಎಂಬುದು 258 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, 3 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ. 13 – 13 ರ ಮೇಲೆ ಕೂಡಿಸುವುದು/ಕಳೆಯುವುದು/ ಗುಣಿಸುವುದು ಮುಂತಾದ ಕ್ರಿಯೆಗಳನ್ನು ಮಾಡುವಾಗ 13 ಎಂದು ಪರಿಗಣಿಸಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ಬೇರೆ ಬೇರೆಯಾಗಿ ಪರಿಗಣಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 13
- ✗ B. 7
- ✓ C. 11
- ✗ D. 15

Q.16 ಎರಡು ಶಬ್ದಗಳು ಸಮಾನ ಸ್ಥಾಯಿ ಮತ್ತು ತಾರಕತೆಗಳನ್ನು ಹೊಂದಿದ್ದರೂ, ಒಂದು ಶಬ್ದವು ಹೆಚ್ಚು ಆಹ್ಲಾದಕರವಾಗಿರುತ್ತದೆ. ಹಾಗಾದರೆ ಅವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಯಾವ ಗುಣಲಕ್ಷಣವು ನಮಗೆ ಸಹಾಯ ಮಾಡುತ್ತದೆ?

Ans
- ✗ A. ತರಂಗಾಂತರ
- ✗ B. ಆವರ್ತನ
- ✓ C. ಗುಣಮಟ್ಟ ಅಥವಾ ನಾದಗುಣ (Quality or timber)
- ✗ D. ಪಾರ (Amplitude)

Q.17 △ ABC ಯಲ್ಲಿ, DE || AC ಆಗಿದ್ದು, ಇಲ್ಲಿ D ಮತ್ತು E ಗಳು ಕ್ರಮವಾಗಿ AB ಮತ್ತು BC ಬಾಹುಗಳಲ್ಲಿರುವ ಬಿಂದುಗಳಾಗಿವೆ. ಒಂದು ವೇಳೆ BD = 10 cm ಮತ್ತು AD = 13 cm ಆಗಿದ್ದರೆ, △ BDE ಯ ವಿಸ್ತೀರ್ಣ ಮತ್ತು ತ್ರಾಪಿಜ್ಯ ADEC ಯ ವಿಸ್ತೀರ್ಣದ ಅನುಪಾತ ಎಷ್ಟು?

Ans
- ✓ A. 100:429
- ✗ B. 430:101
- ✗ C. 429:100
- ✗ D. 101:430

Q.18 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛದಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ)

Ans
- ✗ A. EA – VR
- ✓ B. LH – CZ
- ✗ C. IE – ZV
- ✗ D. TP – KG

Q.19 ಒಂದು ನಲ್ಲಿಯು ಒಂದು ತೊಟ್ಟಿಯನ್ನು 9 ಗಂಟೆಗಳಲ್ಲಿ ತುಂಬಿಸುತ್ತದೆ, ಮತ್ತೊಂದು ನಲ್ಲಿಯು ಪೂರ್ಣ ತೊಟ್ಟಿಯನ್ನು 12 ಗಂಟೆಗಳಲ್ಲಿ ಖಾಲಿ ಮಾಡುತ್ತದೆ. ಒಂದು ವೇಳೆ ತೊಟ್ಟಿಯು ಆರಂಭದಲ್ಲಿ ಖಾಲಿಯಾಗಿದ್ದರೆ ಮತ್ತು ಎರಡೂ ನಲ್ಲಿಗಳನ್ನು ಒಟ್ಟಿಗೆ ತೆರೆದಿಟ್ಟರೆ, ತೊಟ್ಟಿಯ ಅರ್ಧ ಭಾಗವನ್ನು ತುಂಬಿಸಲು ಎಷ್ಟು ಸಮಯ (ಗಂಟೆಗಳಲ್ಲಿ) ಬೇಕಾಗುತ್ತದೆ?

Ans
- ✗ A. 36
- ✗ B. 19
- ✓ C. 18
- ✗ D. 38

blackbook

Q.20 ರಿಜ್ವಾನ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು 37 km ಪೂರ್ವಕ್ಕೆ ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 14 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 58 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 31 km ಚಲಿಸುತ್ತಾರೆ. ಅವರು ಅಂತಿಮವಾಗಿ ಬಲಕ್ಕೆ ತಿರುಗಿ 21 km ಚಲಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು?
(ಸೂಚನೆ: ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ)

Ans
- ✗ A. 16 km ಉತ್ತರಕ್ಕೆ
- ✓ B. 17 km ದಕ್ಷಿಣಕ್ಕೆ
- ✗ C. 14 km ದಕ್ಷಿಣಕ್ಕೆ
- ✗ D. 15 km ದಕ್ಷಿಣಕ್ಕೆ

Q.21 ಸಂಖ್ಯೆ 115, ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಸಂಖ್ಯೆ 226 ಕ್ಕೆ ಸಂಬಂಧಿಸಿದೆ. ಅದೇ ತರ್ಕದಂತೆ ಸಂಖ್ಯೆ 219, ಸಂಖ್ಯೆ 330 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿದರೆ ಸಂಖ್ಯೆ 306 ಈ ಕೆಳಗಿನ ಯಾವ ಆಯ್ಕೆಗೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.)

Ans
- ✓ A. 417
- ✗ B. 415
- ✗ C. 419
- ✗ D. 421

Q.22 ಒಂದು ನೇರ ವೃತ್ತಪಾದ ಶಂಕುವಿನ ವ್ಯಾಸವು 14 m ಆಗಿದೆ ಮತ್ತು ಅದರ ಓರೆ ಎತ್ತರವು 11 m ಆಗಿದೆ. ಹಾಗಾದರೆ ಅದರ ಘನಫಲವನ್ನು ಕಂಡುಹಿಡಿಯಿರಿ.
($\pi = \frac{22}{7}$ ಬಳಸಿ)

Ans
- ✗ A. $108\sqrt{2}$ m^3
- ✗ B. $208\sqrt{2}$ m^3
- ✓ C. $308\sqrt{2}$ m^3
- ✗ D. $408\sqrt{2}$ m^3

Q.23 ಈ ಪ್ರಶ್ನೆಯಲ್ಲಿ, ಕೆಳಗೆ ನೀಡಲಾದ ಸಂಕೇತಗಳು ಮತ್ತು ನಿಯಮಗಳ ಪ್ರಕಾರ ಸಂಖ್ಯೆ/ಚಿಹ್ನೆಗಳ ಗುಂಪಿಗೆ ಅಕ್ಷರ ಸಂಕೇತಗಳನ್ನು ನೀಡಲಾಗಿದೆ. ನಿಯಮಗಳನ್ನು ಪಾಲಿಸುವ ಸರಿಯಾದ ಸಂಕೇತ ಸಂಯೋಜನೆಯು ನಿಮ್ಮ ಉತ್ತರವಾಗಿರುತ್ತದೆ. ಯಾವುದೇ ನಿಯಮಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿರುವಂತೆ ಆಯಾ ಸಂಖ್ಯೆ/ಚಿಹ್ನೆಗೆ ನೇರವಾಗಿ ಸಂಕೇತಗಳನ್ನು ಬಳಸಬೇಕು.

ಸಂಖ್ಯೆ/ಚಿಹ್ನೆ	# $ 9 7 * 6 % 5 3 8
ಸಂಕೇತ	L K A F B J S O H P

ಷರತ್ತುಗಳು –
(i) ಒಂದು ವೇಳೆ ಮೊದಲನೇ ಧಾತುವು ಚಿಹ್ನೆಯಾಗಿದ್ದರೆ ಮತ್ತು ಕೊನೆಯ ಧಾತುವು ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಧಾತುಗಳ ಸಂಕೇತಗಳನ್ನು ಅದಲುಬದಲು ಮಾಡಿ
(ii) ಒಂದು ವೇಳೆ ಎರಡನೇ ಮತ್ತು ಮೂರನೇ ಧಾತುಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೇ ಧಾತುವನ್ನು ಎರಡನೇ ಧಾತುವಿನ ಸಂಕೇತವಾಗಿ ಸಂಕೇತಿಸಿ.
(iii) ಒಂದು ವೇಳೆ ನಾಲ್ಕನೆಯ ಧಾತುವು ಚಿಹ್ನೆಯಾಗಿದ್ದರೆ ಮತ್ತು ಐದನೆಯ ಧಾತುವು ಸಂಖ್ಯೆಯಾಗಿದ್ದರೆ, ಎರಡೂ ಧಾತುಗಳನ್ನು © ಎಂದು ಸಂಕೇತಿಸಿ.

ಈ ಕೆಳಗಿನ ಸಂಖ್ಯೆ-ಚಿಹ್ನೆಗಳ ಗುಂಪಿಗಾಗಿ ಸಂಕೇತ ಯಾವುದು?
#$97*

Ans
- ✗ A. OKAFB
- ✗ B. LKASB
- ✗ C. LKJFB
- ✓ D. LKAFB

blackbook

Q.24 ಸ್ತ್ರೀ ಸಂತಾನೋತ್ಪತ್ತಿ ವ್ಯೂಹದ ಈ ಕೆಳಗಿನ ಯಾವ ಭಾಗವು ಅಂಡಾಣುಗಳ ಉತ್ಪಾದಿಸುವಿಕೆ ಮತ್ತು ಹಾರ್ಮೋನುಗಳ ಬಿಡುಗಡೆಗೆ ಕಾರಣವಾಗಿದೆ?

Ans
- ✗ A. ಅಂಡನಾಳ
- ✗ B. ಗರ್ಭಕೋಶದ ಕಂಠ
- ✗ C. ಗರ್ಭಕೋಶ
- ✓ D. ಅಂಡಾಶಯ

Q.25 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶ್ಯವಾಗಿದ್ದು, ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಯಾವುದು?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✗ A. YEIL
- ✗ B. NTXA
- ✗ C. MSWZ
- ✓ D. XDGK

Q.26 E, F, G, H, W, X ಮತ್ತು Y ಎಂಬ ಏಳು ಜನರು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖ ಮಾಡಿ ಕುಳಿತಿದ್ದಾರೆ. E ಅವರು F ಅವರ ಎಡಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ. W ಅವರ ಎಡದಿಂದ ಎಣಿಸಿದಾಗ, F ಮತ್ತು W ನಡುವೆ ಒಬ್ಬ ವ್ಯಕ್ತಿ ಕುಳಿತಿದ್ದಾನೆ. H ಅವರ ಬಲದಿಂದ ಎಣಿಸಿದಾಗ, Y ಮತ್ತು H ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. X ಅವರು Y ಅವರ ತಕ್ಷಣದ ನೆರೆಹೊರೆಯವರು. ಹಾಗಾದರೆ, G ಅವರ ತಕ್ಷಣದ ಎಡ ಮತ್ತು ತಕ್ಷಣದ ಬಲಕ್ಕೆ ಕ್ರಮವಾಗಿ ಯಾರು ಕುಳಿತಿದ್ದಾರೆ?

Ans
- ✗ A. H ಮತ್ತು F
- ✗ B. X ಮತ್ತು W
- ✗ C. F ಮತ್ತು X
- ✓ D. F ಮತ್ತು W

Q.27 ಒಂದು ಉದ್ಯಾನವನದಲ್ಲಿ ಒಂದು ಬೆಕ್ಕು ಎರಡು ಬೇರೆ ಬೇರೆ ಭಾಗಗಳಲ್ಲಿ ಓಡುತ್ತಿದೆ. ಮೊದಲ ಭಾಗದಲ್ಲಿ ಅದು ತಲಾ 0.4 ಮೀಟರ್ ಉದ್ದದ 70 ಹೆಜ್ಜೆಗಳನ್ನು ಹಾಕಿದೆ. ಎರಡನೇ ಭಾಗದಲ್ಲಿ ಅದು ತನ್ನ ವೇಗವನ್ನು ಹೆಚ್ಚಿಸಿಕೊಂಡಿದ್ದು, ತಲಾ 0.5 ಮೀಟರ್ ಉದ್ದದ 56 ಹೆಜ್ಜೆಗಳನ್ನು ಹಾಕಿದೆ. ಒಂದು ವೇಳೆ ಬೆಕ್ಕು ಪ್ರತಿ ಭಾಗಕ್ಕೂ ಸಮಾನ ಸಮಯವನ್ನು (14 ಸೆಕೆಂಡುಗಳು) ತೆಗೆದುಕೊಂಡರೆ, ಇಡೀ ಓಟದಲ್ಲಿ ಅದರ ಸರಾಸರಿ ವೇಗ ಎಷ್ಟು?

Ans
- ✗ A. 1 m/s
- ✗ B. 4 m/s
- ✓ C. 2 m/s
- ✗ D. 5 m/s

Q.28 ANCHOR ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ/ವೆ?

Ans
- ✗ A. ಒಂದು
- ✗ B. ಯಾವುದೂ ಇಲ್ಲ
- ✓ C. ಮೂರು
- ✗ D. ಎರಡು

Q.29 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ.

TAP BED LOG FIN

ಪ್ರತಿ ಪದದಲ್ಲಿ, ಪ್ರತಿ ಸ್ವರಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಬರುವ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಬರುವ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಎಷ್ಟು ಅಕ್ಷರ-ಗುಚ್ಛಗಳು ಎಡದಿಂದ ಮೊದಲನೇ ಸ್ಥಾನದಲ್ಲಿ ಸ್ವರಾಕ್ಷರವನ್ನು ಹೊಂದಿರುತ್ತವೆ?

Ans
- ✗ A. 1
- ✗ B. 3
- ✗ C. 4
- ✓ D. 2

Q.30 ಸರಳೀಕರಿಸಿ: $(2pq + 7q)^2 - (2pq - 7q)^2$.

Ans
- ✗ A. $28p^2q^2$
- ✗ B. $56p^2q$
- ✗ C. $28pq^2$
- ✓ D. $56pq^2$

Q.31 A, B, C, D, E, F ಮತ್ತು G ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೆ ಒಂದರಂತೆ ಪೇರಿಸಲಾಗಿದೆ. ಆದರೆ ಅದೇ ಕ್ರಮದಲ್ಲಿ ಇರಬೇಕಾಗಿಲ್ಲ. E ಯ ಮೇಲ್ಗಡೆ ಕೇವಲ ನಾಲ್ಕು ಪೆಟ್ಟಿಗೆಗಳನ್ನು ಇಡಲಾಗಿದೆ. A ಯ ಕೆಳಗಡೆ ಕೇವಲ ನಾಲ್ಕು ಪೆಟ್ಟಿಗೆಗಳನ್ನು ಇಡಲಾಗಿದೆ. G ಯನ್ನು B ಯ ತಕ್ಷಣದ ಮೇಲ್ಗಡೆ ಆದರೆ E ಯ ಕೆಳಗಡೆ ಇಡಲಾಗಿದೆ. C ಯನ್ನು D ಯ ತಕ್ಷಣದ ಕೆಳಗಡೆ ಇಡಲಾಗಿದೆ. F ಮತ್ತು G ಗಳ ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✗ A. ಮೂರು
- ✗ B. ನಾಲ್ಕು
- ✗ C. ಎರಡು
- ✓ D. ಒಂದು

Q.32 ಒಂದು ವೇಳೆ $2x + 5y = 18$ ಮತ್ತು $2x - 5y = 2$ ಆಗಿದ್ದರೆ, xy ಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. 12
- ✗ B. 16
- ✓ C. 8
- ✗ D. 9

Q.33 ವಿದ್ಯಾರ್ಥಿಗಳ ಗುಂಪು ಪಡೆದಿರುವ ಪಾಕೆಟ್ ಮನಿ ಮೊತ್ತಗಳು 400, 600, 400, 800, 600, 400, 1000 (₹ ಗಳಲ್ಲಿ) ಆಗಿವೆ. ಈ ದತ್ತಾಂಶದ ರೂಢಿಬೆಲೆ ಎಷ್ಟು?

Ans
- ✗ A. ₹600
- ✗ B. ₹800
- ✓ C. ₹400
- ✗ D. ₹1000

Q.34 ಕೆಳಗಿನ ಅಕ್ಷರ, ಚಿಹ್ನೆ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) T © * Q L @ M $ I B A © & J © O © & N £ I © (ಬಲ)

ತನ್ನ ತಕ್ಷಣದ ಹಿಂದೆ ಅಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆ ಅಕ್ಷರವನ್ನು ಹೊಂದಿರುವಂತಹ ಎಷ್ಟು ಅಕ್ಷರಗಳು ಇಲ್ಲಿವೆ?

Ans
- ✗ A. 0
- ✗ B. 3
- ✓ C. 1
- ✗ D. 2

Black

Q.35 FIRMEST ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ನಂತರದ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ನಂತರ ರೂಪುಗೊಂಡ ಎಲ್ಲಾ ಅಕ್ಷರಗಳನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಲಾಗುತ್ತದೆ. ಈ ಕೆಳಗಿನ ಯಾವ ಅಕ್ಷರವು ಹೀಗೆ ರೂಪುಗೊಂಡ ಹೊಸ ಅಕ್ಷರಗಳ ಗುಂಪಿನಲ್ಲಿ ಬಲದಿಂದ ನಾಲ್ಕನೇ ಸ್ಥಾನದಲ್ಲಿರುತ್ತದೆ?

Ans
- ✗ A. J
- ✗ B. G
- ✓ C. N
- ✗ D. S

Q.36 ಒಂದು ಕಾರಿನ ರೇಡಿಯೇಟರ್ 51% ಘನೀಕರಣರೋಧಕ ದ್ರಾವಣವನ್ನು ಹೊಂದಿರಬೇಕು. ಒಬ್ಬ ವಾಹನ ಚಾಲಕನು 9 ಲೀಟರ್ ಗಳ 23% ಘನೀಕರಣರೋಧಕ ದ್ರಾವಣವನ್ನು ಹೊಂದಿದ್ದಾನೆ. ಅವನು 51% ಘನೀಕರಣರೋಧಕ ದ್ರಾವಣವನ್ನು ತಯಾರಿಸಲು ಎಷ್ಟು ಲೀಟರ್ 97% ಘನೀಕರಣರೋಧಕ ದ್ರಾವಣವನ್ನು (2 ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿದೆ) ತನ್ನ ದ್ರಾವಣಕ್ಕೆ ಸೇರಿಸಬೇಕು?

Ans
- ✗ A. 6.94
- ✗ B. 4.18
- ✗ C. 10.39
- ✓ D. 5.48

Q.37 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು..

ಸಂಖ್ಯೆ/ಚಿಹ್ನೆ $ 7 3 + 8 # @ 5 ! &

ಸಂಕೇತ SHUE TAQ WJB

ಷರತ್ತುಗಳು–
(i) ಒಂದು ವೇಳೆ ಮೊದಲ ಅಂಶವು ಸಂಕೇತವಾಗಿದ್ದರೆ ಮತ್ತು ಕೊನೆಯ ಅಂಶವು ಒಂದು ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಿ.
(ii) ಒಂದು ವೇಳೆ ಎರಡನೇ ಮತ್ತು ಮೂರನೇ ಅಂಶಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೇ ಅಂಶವನ್ನು ಎರಡನೇ ಅಂಶದ ಸಂಕೇತವಾಗಿ ಸಂಕೇತಿಸಿ.
(iii) ಒಂದು ವೇಳೆ ನಾಲ್ಕನೇ ಅಂಶವು ಚಿಹ್ನೆಯಾಗಿದ್ದಾರೆ ಐದನೇ ಅಂಶವು ಸಂಖ್ಯೆಯಾಗಿದ್ದರೆ, ಎರಡೂ ಅಂಶಗಳನ್ನು © ಎಂದು ಸಂಕೇತಿಸಿ.

ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
$ 7 3 + #

Ans
- ✗ A. SHUET
- ✗ B. SHUEW
- ✓ C. SHHEA
- ✗ D. SJUET

Q.38 ಒಂದುವೇಳೆ $137^{0.61} = x$, $137^{0.25} = y$ ಮತ್ತು $x^z = y^6$ ಆಗಿದ್ದರೆ, z ನ ಮೌಲ್ಯವು _____ ಕ್ಕೆ ಸಮೀಪದಲ್ಲಿರುತ್ತದೆ.

Ans
- ✗ A. 4.48
- ✓ B. 2.46
- ✗ C. 2.89
- ✗ D. 4.17

Q.39 ಎರಡು ಸಂಖ್ಯೆಗಳ ಮ.ಸಾ.ಅ. ಮತ್ತು ಲ.ಸಾ.ಅ. ಕ್ರಮವಾಗಿ 48 ಮತ್ತು 576 ಆಗಿವೆ. ಅವುಗಳಲ್ಲಿ ಒಂದು ಸಂಖ್ಯೆಯು 192 ಆಗಿದ್ದರೆ, ಇನ್ನೊಂದು ಸಂಖ್ಯೆಯನ್ನು ಕಂಡುಹಿಡಿಯಿರಿ.

Ans
- ✗ A. 143
- ✗ B. 136
- ✗ C. 141
- ✓ D. 144

blackbook

Q.40 ಕೊಟ್ಟಿರುವ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಲು ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಈ ಕೆಳಗಿನ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?
GDF 8, JGI 13, MJL 18, PMO 23, ?

Ans
✗ A. TPQ 28
✗ B. SPR 27
✗ C. TPR 27
✓ D. SPR 28

Q.41 E, R, T, Y, U ಮತ್ತು W ಎಂಬವರು ಒಂದೇ ಕಟ್ಟಡದ ಆರು ಬೇರೆ ಬೇರೆ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಕಟ್ಟಡದ ಅತ್ಯಂತ ಕೆಳಗಿನ ಮಹಡಿಗೆ 1 ಮತ್ತು ಅದರ ಮೇಲಿನ ಮಹಡಿಗೆ 2 ಎಂಬ ಸಂಖ್ಯೆ ನೀಡಲಾಗಿದೆ ಹಾಗೂ ಹೀಗೆಯೇ ಮುಂದುವರಿದು ಅತ್ಯಂತ ಮೇಲಿನ ಮಹಡಿಗೆ 6 ಎಂಬ ಸಂಖ್ಯೆ ನೀಡಲಾಗಿದೆ.
E ಅವರು ಬೆಸ ಸಂಖ್ಯೆಯ ಮಹಡಿಯಲ್ಲಿ ವಾಸಿಸುತ್ತಿದ್ದಾರೆ, ಆದರೆ 5 ರಲ್ಲಿ ಅಲ್ಲ. E ಮತ್ತು R ವಾಸಿಸುವ ಮಹಡಿಗಳ ಮೊತ್ತ 5 ಆಗಿದೆ. R ಮತ್ತು W ನಡುವೆ ಕೇವಲ 3 ಜನರು ವಾಸಿಸುತ್ತಿದ್ದಾರೆ. U ಅವರು T ಯ ತಕ್ಷಣದ ಮೇಲೆ ವಾಸಿಸುತ್ತಿದ್ದಾರೆ.
ಹಾಗಾದರೆ T ಯ ಕೆಳಗೆ ಎಷ್ಟು ಜನರು ವಾಸಿಸುತ್ತಿದ್ದಾರೆ?

Ans
✓ A. 3
✗ B. 1
✗ C. 2
✗ D. 4

Q.42 A, B, C, D, E, F ಮತ್ತು G ಎಂಬ ಏಳು ಜನರು ಒಂದು ನೇರ ಸಾಲಿನಲ್ಲಿ ಉತ್ತರಕ್ಕೆ ಮುಖ ಮಾಡಿ ಕುಳಿತಿದ್ದಾರೆ. E ಯ ಬಲಕ್ಕೆ ನಾಲ್ಕು ಜನರು ಮಾತ್ರ ಕುಳಿತಿದ್ದಾರೆ. F ನ ಎಡಕ್ಕೆ ನಾಲ್ಕು ಜನರು ಮಾತ್ರ ಕುಳಿತಿದ್ದಾರೆ. G ಅವರು C ಮತ್ತು E ಅವರ ತಕ್ಷಣದ ನೆರೆಹೊರೆಯವರು. B ಯು D ಅವರ ಎಡಕ್ಕೆ ಮೂರನೇ ಸ್ಥಾನದಲ್ಲಿ ಕುಳಿತಿದ್ದಾರೆ. ಹಾಗಾದರೆ, A ಮತ್ತು E ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
✗ A. ಒಬ್ಬರು
✗ B. ನಾಲ್ವರು
✗ C. ಮೂವರು
✓ D. ಇಬ್ಬರು

Q.43 $\frac{(\cot^2 A - \tan^2 A)(\sin^2 A - 1)(\cos^2 A - 1)}{(2\cos^2 A - 1)} + \frac{(1 + \cot^2 A)}{\sin A}$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

Ans
✗ A. $\sin^3 A - 1$
✗ B. $\sin^3 A + 1$
✓ C. $1 + \operatorname{cosec}^3 A$
✗ D. $1 - \operatorname{cosec}^3 A$

Q.44 ಒಂದುವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಏನು ಬರುತ್ತದೆ?
9 B 3 D 21 A 3 C 2 = ? D 8

Ans
✗ A. 32
✗ B. 34
✗ C. 33
✓ D. 30

Q.45 ಒಂದು ನಿರ್ದಿಷ್ಟ ಮೊತ್ತದ ಮೇಲೆ ವಾರ್ಷಿಕ 12% ದರದಲ್ಲಿ 2 ವರ್ಷಗಳ ಅವಧಿಗೆ ಸಿಗುವ ಚಕ್ರಬಡ್ಡಿ (ವಾರ್ಷಿಕ ಚಕ್ರಬಡ್ಡಿ ಲೆಕ್ಕಾಚಾರದಲ್ಲಿ) ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸವು ₹57.60 ಆಗಿದೆ. ಹಾಗಾದರೆ ಅಸಲು ಮೊತ್ತವನ್ನು ಲೆಕ್ಕ ಹಾಕಿರಿ.

Ans
✗ A. ₹3000
✗ B. ₹4500
✓ C. ₹4000
✗ D. ₹3500

Black book

Q.46 ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಆಯ್ಕೆ ಸರಿ ಹೊಂದುತ್ತದೆ?
6, 12, 24, 48, ?

Ans
- ✔ A. 96
- ✘ B. 98
- ✘ C. 102
- ✘ D. 90

Q.47 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವ ಸಂಖ್ಯೆಯು ಸರಿ ಹೊಂದುತ್ತದೆ?

6 10 15 21 28 36 ?

Ans
- ✘ A. 43
- ✘ B. 48
- ✔ C. 45
- ✘ D. 47

Q.48 ಈ ಕೆಳಗೆ ಕೊಟ್ಟಿರುವ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆರಿಸಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

ABF–JKO
DEI–MNR

Ans
- ✔ A. RSW–ABF
- ✘ B. RSW–ZBE
- ✘ C. RRU–ABF
- ✘ D. RRU–ZAE

Q.49 ಒಬ್ಬ ವ್ಯಕ್ತಿಯು ₹56,000 ಮೊತ್ತವನ್ನು ವಾರ್ಷಿಕ 10% ಸರಳ ಬಡ್ಡಿದರದಲ್ಲಿ 4 ವರ್ಷಗಳ ಅವಧಿಗೆ ಹೂಡಿಕೆ ಮಾಡಿದನು. ಹಾಗಾದರೆ 4 ವರ್ಷಗಳ ನಂತರ ಅವನಿಗೆ ಸಿಗುವ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
- ✔ A. 78,400
- ✘ B. 79,400
- ✘ C. 81,400
- ✘ D. 80,400

Q.50 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಪರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಪರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಒಂದುವೇಳೆ ಯಾವುದೇ ಪರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.
ಸಂಖ್ಯೆ/ಚಿಹ್ನೆ $? * & + 7 5 9 ! %
ಸಂಕೇತ E D C Y R X T L O I
ಪರತ್ತುಗಳು -
(i) ಒಂದು ವೇಳೆ ಮೊದಲ ಅಂಶವು ಚಿಹ್ನೆ ಮತ್ತು ಕೊನೆಯ ಅಂಶವು ಒಂದು ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಿ.
(ii) ಒಂದು ವೇಳೆ ಎರಡನೇ ಮತ್ತು ಮೂರನೇ ಅಂಶಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೇ ಅಂಶವನ್ನು ಎರಡನೇ ಅಂಶದ ಸಂಕೇತವಾಗಿ ಸಂಕೇತಿಸಿ.
(iii) ಒಂದು ವೇಳೆ ನಾಲ್ಕನೇ ಅಂಶವು ಚಿಹ್ನೆಯಾಗಿದ್ದಾರೆ ಮತ್ತು ಐದನೇ ಅಂಶವು ಸಂಖ್ಯೆಯಾಗಿದ್ದರೆ, ಎರಡೂ ಅಂಶಗಳನ್ನು © ಎಂದು ಸಂಕೇತಿಸಿ.

ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
$? * & +

Ans
- ✘ A. EDCOR
- ✔ B. EDCYR
- ✘ C. EDLYR
- ✘ D. TDCYR

Black

Q.51 ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

Ans

✗ A. ಸಂಪೂರ್ಣ ವಕ್ರೀಭವನ ಸೂಚ್ಯಂಕವು ದೃಷ್ಟಿಗೋಚರ ಸಾಂದ್ರತೆಗೆ ಸಂಬಂಧಿಸಿಲ್ಲ.

✗ B. ಹೆಚ್ಚಿನ ನಿರಪೇಕ್ಷ ವಕ್ರೀಭವನ ಸೂಚ್ಯಂಕ ಹೊಂದಿರುವ ಒಂದು ಮಾಧ್ಯಮವು ದೃಷ್ಟಿಗೋಚರವಾಗಿ ವಿರಳವಾಗಿದೆ.

✗ C. ಕಡಿಮೆ ನಿರಪೇಕ್ಷ ವಕ್ರೀಭವನ ಸೂಚ್ಯಂಕವನ್ನು ಹೊಂದಿರುವ ಒಂದು ಮಾಧ್ಯಮವು ದೃಷ್ಟಿಗೋಚರವಾಗಿ ಸಾಂದ್ರವಾಗಿದೆ.

✓ D. ಹೆಚ್ಚಿನ ನಿರಪೇಕ್ಷ ವಕ್ರೀಭವನ ಸೂಚ್ಯಂಕ ಹೊಂದಿರುವ ಒಂದು ಮಾಧ್ಯಮವು ದೃಷ್ಟಿಗೋಚರವಾಗಿ ಸಾಂದ್ರವಾಗಿದೆ.

Q.52 ಒಂದು ವೇಳೆ 'A' ಅಂದರೆ '÷', 'B' ಅಂದರೆ 'x', 'C' ಅಂದರೆ '+' ಮತ್ತು 'D' ಅಂದರೆ '-' ಆಗಿದ್ದರೆ, ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?
17 D 6 B 4 C 49 A 7 = ?

Ans

✓ A. 0

✗ B. 7

✗ C. 4

✗ D. 12

Q.53 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಸಂಖ್ಯೆಯ ಎರಡು ಹೇಳಿಕೆಗಳು ಬರುತ್ತವೆ. ಹೇಳಿಕೆಗಳಲ್ಲಿ ಒದಗಿಸಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂದು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿ ಮತ್ತು ಸೂಕ್ತವಾದ ಉತ್ತರವನ್ನು ನಿರ್ಧರಿಸಿ.

W, O, K, G ಮತ್ತು Y ಎಂಬ 5 ಕಂಬಗಳು ವಿಭಿನ್ನ ಎತ್ತರವನ್ನು ಹೊಂದಿದ್ದು, ಯಾವ ಕಂಬವು ಅತಿ ಚಿಕ್ಕದಾಗಿದೆ?
(I) W ಕಂಬವು O ಗಿಂತ ಚಿಕ್ಕದಾಗಿದೆ, ಆದರೆ K ಗಿಂತ ಎತ್ತರವಾಗಿದೆ.
(II) W ಕಂಬವು Y ಗಿಂತ ಚಿಕ್ಕದಾಗಿದೆ. G ಕಂಬವು K ಗಿಂತ ಎತ್ತರವಾಗಿದೆ.

Ans

✗ A. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

✓ B. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡೂ ಒಟ್ಟಾಗಿ (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತವೆ

✗ C. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ಎರಡೂ ಸಾಕಾಗುವುದಿಲ್ಲ

✗ D. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

Q.54 ಒಂದು ಗೋಳದ ತ್ರಿಜ್ಯವನ್ನು 0.5 cm ನಷ್ಟು ಹೆಚ್ಚಿಸಿದಾಗ ಅದರ ಮೇಲ್ಮೈ ವಿಸ್ತೀರ್ಣವು 44 cm^2 ನಷ್ಟು ಹೆಚ್ಚುತ್ತದೆ. ಹಾಗಾದರೆ ಮೂಲ ತ್ರಿಜ್ಯವನ್ನು ಕಂಡುಹಿಡಿಯಿರಿ. ($\pi = \frac{22}{7}$ ಬಳಸಿ)

Ans

✗ A. 4 cm

✓ B. 3.25 cm

✗ C. 4.25 cm

✗ D. 3.5 cm

Q.55 ಮಾನವ್ ಅವರು A ಬಿಂದುವಿನಿಂದ ಚಾಲನೆಯನ್ನು ಆರಂಭಿಸಿ ಪೂರ್ವಕ್ಕೆ 11 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 12 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 13 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 18 km ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 2 km ಚಲಾಯಿಸಿ P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಲಾಯಿಸಬೇಕು? (ನಿರ್ದಿಷ್ಟವಾಗಿ ಸೂಚಿಸದ ಹೊರತು ಎಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

Ans

✗ A. 4 km ಉತ್ತರಕ್ಕೆ

✓ B. 6 km ಉತ್ತರಕ್ಕೆ

✗ C. 5 km ದಕ್ಷಿಣಕ್ಕೆ

✗ D. 4 km ದಕ್ಷಿಣಕ್ಕೆ

Q.56 ಒಂದು ವೇಳೆ 'A' ಅಂದರೆ '÷', 'B' ಅಂದರೆ 'x', 'C' ಅಂದರೆ '+' ಮತ್ತು 'D' ಅಂದರೆ '-' ಆಗಿದ್ದರೆ, ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?
23 D 10 B 3 C 112 A 4 = ?

Ans

✓ A. 21

✗ B. 17

✗ C. 20

✗ D. 14

Q.57 SCRAMBLE ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ(ವೆ)?

Ans

✔ A. ಯಾವುದೂ ಇಲ್ಲ

✘ B. ಮೂರು

✘ C. ಎರಡು

✘ D. ಒಂದು

Q.58 ರುದರ್‌ಫೋರ್ಡ್ ಅವರ ಪ್ರಯೋಗದ ಯಾವ ಅವಲೋಕನವು ಪರಮಾಣು ಬಹುತೇಕ ಖಾಲಿ ಜಾಗವಾಗಿದೆ ಎಂಬ ತೀರ್ಮಾನಕ್ಕೆ ಕಾರಣವಾಯಿತು?

Ans

✘ A. ಆಲ್ಫಾ ಕಣಗಳು ಚಿನ್ನದ ಹಾಳೆಯಿಂದ ಸಂಪೂರ್ಣವಾಗಿ ಹೀರಿಕೊಳ್ಳಲ್ಪಟ್ಟವು

✘ B. ಕೆಲವು ಆಲ್ಫಾ ಕಣಗಳು ಹಾಳೆಯಿಂದ ಹಿಂದಕ್ಕೆ ನೆಗೆದವು

✘ C. ಎಲೆಕ್ಟ್ರಾನ್ ಗಳು ತಿರುಗುವಾಗಿ ಬೆಳಕನ್ನು ಹೊರಸೂಸಿದವು

✔ D. ಹೆಚ್ಚಿನ ಆಲ್ಫಾ ಕಣಗಳು ಹಾಳೆಯ ಮೂಲಕ ನೇರವಾಗಿ ಹಾದುಹೋದವು

Q.59 ಒಂದುವೇಳೆ '+' ಎಂದರೆ '−', '−' ಎಂದರೆ '×', '×' ಎಂದರೆ '÷', '÷' ಎಂದರೆ '+' ಆಗಿದ್ದರೆ ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಸರಿಹೊಂದುತ್ತದೆ?

39 ÷ 24 × 3 − 5 + 19 = ?

Ans

✘ A. 62

✔ B. 60

✘ C. 64

✘ D. 58

Q.60 ಕೆಳಗಿನ ಮಾನದಂಡಗಳನ್ನು ಸರಿಯಾದ ವಿವರಣೆಯೊಂದಿಗೆ ಹೊಂದಿಸಿ.

ವರ್ಗೀಕರಣ ಮಾನದಂಡಗಳು	ವಿವರಣೆ
I). ಪೋಷಣೆಯ ವಿಧಾನ	A) ಕೋಶಭಿತ್ತಿಯ ಉಪಸ್ಥಿತಿ ಅಥವಾ ಅನುಪಸ್ಥಿತಿ
II).ಪರಿಸರಾತ್ಮಕ ಕಾರ್ಯ	B) ಸ್ವಪೋಷಕ ಅಥವಾ ಪರಪೋಷಕ
III). ಜೀವಕೋಶ ರಚನೆ	C) ಉತ್ಪಾದಕ ಜೀವಿಗಳು, ಭಕ್ಷಕ ಜೀವಿಗಳು ಅಥವಾ ವಿಘಟಕ ಜೀವಿಗಳು

Ans

✘ A. I -A, II-B, III-C

✔ B.
I-B, II-C, III-A

✘ C.
I-A, II-C, III-B

✘ D.
I-C, II-B, III-A

Q.61 ಒಬ್ಬ ಅಂಗಡಿಯವನು ಒಂದು ಶರ್ಟ್ ಅನ್ನು ಅದರ ಅಸಲು ಬೆಲೆಗಿಂತ 50% ಹೆಚ್ಚು ನಮೂದಿಸುತ್ತಾನೆ. ನಂತರ ಅವನು ನಮೂದಿತ ಬೆಲೆಯ ಮೇಲೆ 10% ಮತ್ತು 20% ರಂತೆ ಎರಡು ಸತತ ರಿಯಾಯಿತಿಗಳನ್ನು ನೀಡುತ್ತಾನೆ. ಒಂದು ವೇಳೆ ಅಂತಿಮ ಮಾರಾಟ ಬೆಲೆಯು ₹432 ಆಗಿದ್ದರೆ, ಶರ್ಟ್‌ನ ಮೂಲ ಅಸಲು ಬೆಲೆ ಎಷ್ಟು?

Ans

✘ A. ₹360

✘ B. ₹320

✔ C. ₹400

✘ D. ₹280

Q.62 ಒಬ್ಬ ಅಂಗಡಿಯವನು ಪ್ರತಿ ಡಜನ್‌ಗೆ ₹240 ರಂತೆ 60 ಡಜನ್ ವಸ್ತುಗಳನ್ನು ಖರೀದಿಸುತ್ತಾನೆ. ಅವನು ಪ್ರತಿ ವಸ್ತುವನ್ನು ₹25 ಕ್ಕೆ ಮಾರಾಟ ಮಾಡುತ್ತಾನೆ. ಹಾಗಾದರೆ ಅವನಿಗೆ ಬಂದ ಲಾಭದ ಶೇಕಡಾವಾರು ಪ್ರಮಾಣ ಎಷ್ಟು?

Ans

✘ A. 20%

✘ B. 35%

✘ C. 30%

✔ D. 25%

black book

Q.63 ಒಂದು ನಿಗದಿತ ಮೊತ್ತದ ಮೇಲೆ 2 ವರ್ಷಗಳ ಅವಧಿಗೆ ವಾರ್ಷಿಕ 10% ದರದಲ್ಲಿ ಸಿಗುವ ಚಕ್ರಬಡ್ಡಿ (ವಾರ್ಷಿಕ ಚಕ್ರಬಡ್ಡಿ ಲೆಕ್ಕಾಚಾರ ಮಾಡಿದಾಗ) ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸವು ₹21 ಆಗಿದ್ದರೆ, ಅಸಲು ಮೊತ್ತ ಎಷ್ಟು?

Ans
- ✗ A. ₹2,000
- ✗ B. ₹2,200
- ✓ C. ₹2,100
- ✗ D. ₹2,500

Q.64 ಒಂದುವೇಳೆ $9\sec^2\theta - 6\tan^2\theta = 15$ ಆಗಿದ್ದರೆ, θ ಎಂಬುದು ಒಂದು ಲಘುಕೋನವಾಗಿದ್ದರೆ, $\operatorname{cosec}\theta$ ದ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. $\frac{3}{\sqrt{2}}$
- ✓ B. $\sqrt{\frac{3}{2}}$
- ✗ C. $\frac{2}{\sqrt{3}}$
- ✗ D. $\sqrt{\frac{2}{3}}$

Q.65 ಒಬ್ಬ ವ್ಯಕ್ತಿಯು ₹350 ಕ್ಕೆ ಒಂದು ಕುರ್ಚಿಯನ್ನು ಖರೀದಿಸುತ್ತಾನೆ, ಅದನ್ನು 10% ನಷ್ಟಕ್ಕೆ ಮಾರಾಟ ಮಾಡುತ್ತಾನೆ. ಹಾಗಾದರೆ ಮಾರಾಟದ ಬೆಲೆ ಎಷ್ಟು?

Ans
- ✗ A. ₹310
- ✗ B. ₹320
- ✓ C. ₹315
- ✗ D. ₹300

Q.66 ಹೆಚ್ಚು ಕ್ರಿಯಾಶೀಲತೆ ಹೊಂದಿರುವ ಒಂದು ಲೋಹವು ಕಡಿಮೆ ಕ್ರಿಯಾಶೀಲತೆ ಹೊಂದಿರುವ ಇನ್ನೊಂದು ಲೋಹದ ಲವಣ ದ್ರಾವಣದೊಂದಿಗೆ ವರ್ತಿಸಿದಾಗ, ಯಾವ ರೀತಿಯ ಕ್ರಿಯೆ ಉಂಟಾಗುತ್ತದೆ?

Ans
- ✗ A. ಸಂಕಲನ
- ✓ B. ಸ್ಥಾನಪಲ್ಲಟ
- ✗ C. ಮರುಜೋಡಣೆ
- ✗ D. ಆದೇಶನ

Q.67 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಈ ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿಯಲ್ಲಿ, ಎರಡನೇ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ, ಮತ್ತು ಈ ಪ್ರಕ್ರಿಯೆಯು ಹೀಗೆಯೇ ಮುಂದುವರೆಯುತ್ತದೆ. ಹಾಗಾದರೆ ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವ ಸಂಖ್ಯಾ ಗಣಗಳ ರೀತಿಯ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ – ಕ್ರಿಯೆಗಳನ್ನು ನಡೆಸುವಾಗ ಎರಡು/ಮೂರು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾಹರಣೆಗೆ 37 ರ ನಂತರ 10 ಬಂದರೆ, ಕ್ರಿಯೆಯು 3+7 ಆಗಿರಬಾರದು, ಏಕೆಂದರೆ ಎರಡು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ)
14 - 9 - 1 - 3
7 - 2 - (-6) - (-18)

Ans
- ✗ A. 50 - 44 - 36 - 72
- ✓ B. 9 - 4 - (-4) - (-12)
- ✗ C. 8 - 3 - (-7) - (-14)
- ✗ D. 22 - 18 - 11 - 33

Q.68 ಕೆಳಗಿನ ಅಕ್ಷರ, ಚಿಹ್ನೆ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) T V @ $ @ £ £ © E R S € N W # % # M N © € $ (ಬಲ)

ತನ್ನ ತಕ್ಷಣದ ಹಿಂದೆ ಅಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆ ಅಕ್ಷರವನ್ನು ಹೊಂದಿರುವಂತಹ ಎಷ್ಟು ಅಕ್ಷರಗಳು ಇಲ್ಲಿವೆ?

Ans

✗ A. 2

✗ B. 3

✓ C. 1

✗ D. 0

Q.69 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿದ ಒಂದು ನಿರ್ದಿಷ್ಟ ರೀತಿಯಲ್ಲಿ CYUW ಎಂಬುದು YUQS ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, OKGI ಎಂಬುದು KGCE ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, IEAC ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans

✓ A. EAWY

✗ B. EZVY

✗ C. EBVB

✗ D. EAVY

Q.70 ಮೆದುಳಿನ ಯಾವ ಭಾಗವು ಯೋಚಿಸಲು ಮತ್ತು ನಿರ್ಧಾರ ತೆಗೆದುಕೊಳ್ಳಲು ಮುಖ್ಯವಾಗಿ ಕಾರಣವಾಗಿದೆ?

Ans

✗ A. ಮಧ್ಯ-ಮೆದುಳು

✗ B. ಮೆದುಳಿನ ಹಿಂಬಾಗ

✓ C. ಮುಮ್ಮಿದುಳು

✗ D. ಮೆದುಳು ಬಳ್ಳಿ

Q.71 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ. ಸೂಚನೆ: ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ /ಚಿಹ್ನೆ + & ! @ 7 8 9 * 4 $

ಸಂಕೇತ P Z FK UXQYI A

ಷರತ್ತುಗಳು –
(i) ಮೊದಲನೆಯ ಘಟಕಾಂಶವು ಚಿಹ್ನೆಯಾಗಿದ್ದರೆ ಮತ್ತು ಕೊನೆಯ ಘಟಕಾಂಶವು ಸಂಖ್ಯೆಯಾಗಿದ್ದರೆ, ಆ ಮೊದಲ ಮತ್ತು ಕೊನೆಯ ಘಟಕಾಂಶಗಳ ಸಂಕೇತಗಳನ್ನು ಪರಸ್ಪರ ಅದಲು ಬದಲು ಮಾಡಬೇಕು.
(ii) ಎರಡನೇ ಮತ್ತು ಮೂರನೇ ಘಟಕಾಂಶಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೇ ಘಟಕಾಂಶವನ್ನು ಎರಡನೇ ಘಟಕಾಂಶದ ಸಂಕೇತವಾಗಿ ಸಂಕೇತಿಸಬೇಕು.
(iii) ನಾಲ್ಕನೇ ಘಟಕಾಂಶವು ಚಿಹ್ನೆಯಾಗಿದ್ದರೆ ಮತ್ತು ಐದನೇ ಘಟಕಾಂಶವು ಸಂಖ್ಯೆಯಾಗಿದ್ದರೆ, ನಾಲ್ಕನೇ ಮತ್ತು ಐದನೇ ಘಟಕಾಂಶಗಳನ್ನು © ಎಂದು ಸಂಕೇತಿಸಬೇಕು.

9&!@7 ಇದರ ಸಂಕೇತವೇನು?

Ans

✗ A. PZA©©

✗ B. UYFKQ

✓ C. QZF©©

✗ D. IZFKU

Q.72 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಸಂಖ್ಯೆಯ ಎರಡು ಹೇಳಿಕೆಗಳು ಬರುತ್ತವೆ. ಹೇಳಿಕೆಗಳಲ್ಲಿ ಒದಗಿಸಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂದು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿ ಮತ್ತು ಸೂಕ್ತವಾದ ಉತ್ತರವನ್ನು ನಿರ್ಧರಿಸಿ.

A, W, V, G ಮತ್ತು E ಎಂಬ 5 ಕಂಬಗಳು ವಿಭಿನ್ನ ಎತ್ತರವನ್ನು ಹೊಂದಿದ್ದು, ಯಾವ ಕಂಬವು ಅತಿ ಚಿಕ್ಕದಾಗಿದೆ?
(I) V ಕಂಬವು ಎರಡು ಕಂಬಗಳಿಗಿಂತ ಮಾತ್ರ ಎತ್ತರವಾಗಿದೆ. A ಕಂಬವು V ಗಿಂತ ಚಿಕ್ಕದು ಮತ್ತು W ಕಂಬವು A ಗಿಂತ ಚಿಕ್ಕದಾಗಿದೆ.
(II) G ಕಂಬವು E ಗಿಂತ ಎತ್ತರವಾಗಿದೆ.

Ans
- ✔ A. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
- ✘ B. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
- ✘ C. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ಎರಡೂ ಸಾಕಾಗುವುದಿಲ್ಲ
- ✘ D. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡೂ ಒಟ್ಟಾಗಿ (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತವೆ

Q.73 ಈ ಕೆಳಗಿನ ಸರಣಿಯು ತಾರ್ಕಿಕವಾಗಿ ಪೂರ್ಣಗೊಳ್ಳಬೇಕಾದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?

PHL 2 MJJ -4 JLH 8 GNF -16 ?

Ans
- ✔ A. DPD 32
- ✘ B. GHY 67
- ✘ C. GYT 35
- ✘ D. FRE 34

Q.74 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರು-ಅಂಕಿಗಳುಳ್ಳ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 214 359 369 741 846 (ಬಲ)
(ಉದಾಹರಣೆಗೆ- 697ರಲ್ಲಿ – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)
ಸೂಚನೆ: ಎಲ್ಲಾ ಕ್ರಿಯೆಗಳನ್ನು ಎಡದಿಂದ ಬಲಕ್ಕೆ ಮಾಡಬೇಕು.
ಒಂದು ವೇಳೆ ಅತಿ ದೊಡ್ಡ ಸಂಖ್ಯೆಯ ಎರಡನೇ ಅಂಕಿಯನ್ನು ಅತಿ ಚಿಕ್ಕ ಸಂಖ್ಯೆಯ ಎರಡನೇ ಅಂಕಿಗೆ ಕೂಡಿಸಿದರೆ ಸಿಗುವ ಸಂಖ್ಯೆ ಯಾವುದು?

Ans
- ✔ A. 5
- ✘ B. 8
- ✘ C. 15
- ✘ D. 9

Q.75 ಆರು ಸ್ನೇಹಿತರಿರುವ ಒಂದು ಗುಂಪು ಊಟಕ್ಕೆ ₹120, ₹135, ₹145, ₹150, ₹125, ಮತ್ತು x ಎಂಬ ಮೊತ್ತಗಳನ್ನು ಖರ್ಚು ಮಾಡಿದೆ. ಅವರ ಸರಾಸರಿ ಖರ್ಚು ₹140 ಆಗಿದ್ದರೆ, x ನ ಮೌಲ್ಯ ಎಷ್ಟು?

Ans
- ✔ A. ₹165
- ✘ B. ₹155
- ✘ C. ₹160
- ✘ D. ₹170

"